**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 677/2015**

| | | | |
|---|---|---|---|
| ಸಾಕ್ಷಿದಾರರ ಹೆಸರು | | **ಟಿ.ಸಿ ಜಗದೀಶ್** | ಪ್ರಾಸಾಃ 3 |
| ತಂದೆಯ/ಗಂಡನ ಹೆಸರು | | ಟಿ.ವಿ.ಚಂದ್ರಮೌಳಿ | ಚಾಸಾಃ 1 |
| ವಯಸ್ಸು | | 64 ವರ್ಷ | |
| ಕೆಲಸ | | ನಿವೃತ್ತ ಸಹಾಯಕ ನಿರ್ದೇಶಕರು, ಆಹಾರ ಇಲಾಖೆ | ಸಾ ಪ್ರ ಬೋ |
| ವಾಸ | | ಮೈಸೂರು | ದಿಃ 31/10/2022 |

**ಮುಖ್ಯ ವಿಚಾರಣೆ ಮಾನ್ಯ ಎ.ಪಿ.ಪಿ.ಯವರಿಂದಃ**

2009 ರಿಂದ 2015 ರ ವರೆಗೂ ನಾನು ನಂಜನಗೂಡಿನ ತಾಲ್ಲೂಕು ಕಛೇರಿಯಲ್ಲಿ ಆಹಾರ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಈ ಅವಧಿಯಲ್ಲಿ ಚಾಸಾ-2 ರವರು ನಮ್ಮ ಇಲಾಖೆಯಲ್ಲಿ ಆಹಾರ ಶಿರಸ್ತೆದಾರರಾಗಿ ಕರ್ತವ್ಯ ನಿರ್ವಹಿಸಿಸುತ್ತಿದ್ದರು.

ಆರೋಪಿ ಗೊತ್ತು. ಚಾಸಾ-2 ರಿಂದ ಚಾಸಾ-11 ಮತ್ತು 13 ಗೊತ್ತು. ದಿನಾಂಕ 10.11.2013 ರಂದು ನಾನು ಕರ್ತವ್ಯದಲ್ಲಿ ಇರುವಾಗ ನಂಜನಗೂಡು ತಾಲ್ಲೂಕು , ದೊಡ್ಡಕವಲಂದೆ ಗ್ರಾಮದ ಆರ್.ಕೆ. ಹೊಟೇಲ್ ಗೆ ಹೊಂದಿಕೊಂಡಂತಿರುವ ಮಳಿಗೆಯಲ್ಲಿ ನೀಲಿ ಸೀಮೆಎಣ್ಣೆ ಅಕ್ರಮ ದಾಸ್ತಾನು ಮಾಡಿಕೊಂಡು ಕಾಳ ಸಂತೆಯಲ್ಲಿ ಮಾರಾಟ ಮಾಡುತ್ತಿದ್ದಾರೆ ಎಂದು ಬಂದ ಖಚಿತ ವರ್ತಮಾನದ ಮೇರೆಗೆ ಚಾಸಾ-2, ಚಾಸಾ-13 ಮತ್ತು ಕವಲಂದೆ ಪೊಲೀಸ್ ಠಾಣೆಯ ಇತರೆ ಸಿಬ್ಬಂದಿಯವರಾದ ಚಾಸಾ-5 ರಿಂದ 7 ರವರೊಂದಿಗೆ ಮತ್ತು ಪಂಚರಾದ ಚಾಸಾ-3 ಮತ್ತು 4 ರವರೊಂದಿಗೆ ಸ್ಥಳಕ್ಕೆ ಬೆಳಗ್ಗೆ 10.00 ಗಂಟೆಗೆ ಹೋಗಿ ನೋಡಲಾಗಿ ಆರ್.ಕೆ. ಹೊಟೇಲ್ ಗೆ ಹೊಂದಿಕೊಂಡಂತಿರುವ ಮಳಿಗೆಯಲ್ಲಿ ಒಬ್ಬ ಅಸಾಮಿ ಕುಳಿತಿದ್ದು ಆತನನ್ನು ವಿಚಾರಿಸಲಾಗಿ ತನ್ನ ಹೆಸರು ಇಬ್ರಾಹಿಂ ಖಾನ್ ತಂದೆಯ ಹೆಸರು ಕಲೀಂ ಉಲ್ಲಾ ಖಾನ್, 19 ವರ್ಷ, ಕವಲಂದೆ ನಿವಾಸಿ ಎಂದು ತಿಳಿಸಿದ್ದು. ಸದರಿ ಮಳಿಗೆಯನ್ನು ಪರಿಶೀಲನೆ ಮಾಡುವುದಕ್ಕೆ ಇದೆ ಎಂದು ಹೇಳಿದಾಗ ಆತ ಮಳಿಗೆಯ ಬಾಗಿಲನ್ನು ತೆಗೆದಿದ್ದು , ಒಳ ಹೋಗಿ ಪರಿಶೀಲಿಸಲಾಗಿ ಮಳಿಗೆಯ ಅಳತೆ 8*15 ಅಡಿ ಮತ್ತು ಮೇಲ್ಚಾವಣಿ ಕಲ್ನಾರು ಶೀಟ್ ನಿಂದ ಕೂಡಿರುತ್ತದೆ. ಮಳಿಗೆಯ ಒಳಗೆ ನೋಡಲಾಗಿ 35 ಲೀಟರ್ ಸಾಮರ್ಥದ 6 ಪ್ಲಾಸ್ಟಿಕ್ ಕ್ಯಾನ್ ಗಳು ಇದ್ದು ಅವುಗಳ ಬುರುಡೆ ಬಿಚ್ಚಿ ನೋಡಲಾಗಿ ನೀಲಿ ಬಣ್ಣದ ಸೀಮೆಎಣ್ಣೆ ಇತ್ತು. ನೀಲಿ ಬಣ್ಣದ ಸೀಮೆಎಣ್ಣೆಯನ್ನು ಪಡಿತರ ಚೀಟಿದಾರರಿಗೆ ಹಂಚಿಕೆ ಮಾಡುವ ಸಲುವಾಗಿ ಮಾತ್ರ

ಬಳಸಲಾಗುತ್ತದೆ. ಆರೋಪಿಯನ್ನು ಸೀಮೆಎಣ್ಣೆಯ ಬಗ್ಗೆ ಸೀಮೆಎಣ್ಣೆಯನ್ನು ಇಟ್ಟುಕೊಳ್ಳಲು ರಹದಾರಿ ಇದೆಯೇ ಎಂದು ಕೇಳಿದ್ದಕ್ಕೆ ಆರೋಪಿಯು ಇಲ್ಲ ಎಂದು ನುಡಿದಿರುತ್ತಾನೆ. ಆರೋಪಿಯು ಸದರಿ ಸೀಮೆಎಣ್ಣೆಯನ್ನು ಗ್ರಾಮಾಂತರ ಪ್ರದೇಶದ ಪಡಿತರ ಚೀಟಿದಾರರಿಂದ ಲೀಟರ್ ಗೆ 38/- ರೂ ನಂತೆ ಖರೀದಿ ಮಾಡಿ ಲಾರಿಗಳಿಗೆ ಲೀಟರ್ ಗೆ 40/- ರೂ ನಂತೆ ಮಾರಾಟ ಮಾಡಲು ದಾಸ್ತಾನು ಮಾಡಲಾಗಿದೆ ಎಂದು ನುಡಿದಿರುತ್ತಾರೆ. ಸದರಿ ಮಳಿಗೆಯನ್ನು ಪರಿಶೀಲಿಸಿದಾಗ ಅಲ್ಲಿ 5 ಲೀಟರ್ ಸಾಮಾರ್ಥ್ಯದ ಒಂದು ಕಬ್ಬಿಣದ ಅಳತೆ ಮಾಪನ , ಒಂದು ಕಬ್ಬಿಣದ ಆಲಿಕೆ ಮತ್ತು ಕಬ್ಬಿಣದ ಬಕೆಟ್ ಕಂಡು ಬಂದಿದ್ದು ಅವುಗಳನ್ನು ಪಂಚರ ಸಮಕ್ಷಮ ಅಮಾನತ್ತು ಪಡಿಸಿಕೊಂಡಿರುತ್ತೇವೆ. 6 ಪ್ಲಾಸ್ಟಿಕ್ ಕ್ಯಾನ್ ಗಳಲ್ಲಿ ಒಟ್ಟು 210 ಲೀಟರ್ ನೀಲಿ ಸೀಮೆಎಣ್ಣೆ ಇದ್ದು, ಅದರ  ಪೈಕಿ  4 ಗಾಜಿನ ಬಾಟಲುಗಳಲ್ಲಿ ತಲಾ 750 ಎಂ.ಎಲ್ ನೀಲಿ ಸೀಮೆಎಣ್ಣೆಯನ್ನು ಮಾದರಿಗೆಂದು ತೆಗೆದು ಪಿ.ಆರ್.ಒ ಎಂಬ ಇಂಗ್ಲೀಷ್ ಅಕ್ಷರದಿಂದ ಬರೆದು ಅರಗಿನಿಂದ ಸೀಲ್ ಮಾಡಿ ತೆಗೆದಿರಿಸಲಾಯಿತು. ಉಳಿಕೆ ನೀಲಿ ಸೀಮೆಎಣ್ಣೆಯನ್ನು ದೊಡ್ಡ ಕವಲಂದೆಯ P.A.C.C.B ಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ನೀಡಿ ಅವರಿಂದ ಸ್ವೀಕೃತಿ ಪತ್ರ ಪಡೆದಿರುತ್ತೇನೆ.

ಪಂಚನಾಮೆಯನ್ನು ಬೆಳಗ್ಗೆ 10.15 ರಿಂದ 12.30 ರವರೆಗೆ ಜರುಗಿಸಲಾಯಿತು. ನಂತರ ಆರೋಪಿ, ಅಮಾನತ್ತು ಪಡಿಸಿಕೊಂಡ ಪರಿಕರಗಳು ಮತ್ತು ಸ್ವೀಕೃತಿ ಪತ್ರವನ್ನು ಕವಲಂದೆ ಪೊಲೀಸ್ ಠಾಣೆಗೆ ನೀಡಲಾಗಿರುತ್ತದೆ. ಸ್ಥಳ ಮಹಜರ್ ಸಮಯದಲ್ಲಿ ಆರೋಪಿಯ ಸ್ವಇಚ್ಚಾ ಹೇಳಿಕೆಯನ್ನು ದಾಖಲು ಮಾಡಿಕೊಂಡಿರುತ್ತೇನೆ.

ಸಾಕ್ಷಿಗೆ ಒಂದು ದಾಖಲಾತಿ ತೋರಿಸಿದ್ದು ಅದು  ಸ್ಥಳ ಪಂಚನಾಮೆ ಯಾಗಿದ್ದು, ಸ್ಥಳ ಪಂಚನಾಮೆ ಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸ್ಥಳ ಪಂಚನಾಮೆ ಯನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಒಂದು  ದಾಖಲಾತಿ ತೋರಿಸಿದ್ದು ಅದು ದೂರಾಗಿದ್ದು, ದೂರಿನಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ದೂರನ್ನು ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಒಂದು  ದಾಖಲಾತಿ ತೋರಿಸಿದ್ದು ಅದು ಸ್ವೀಕೃತಿ ಪತ್ರವಾಗಿದ್ದು, ಸ್ವೀಕೃತಿ ಪತ್ರದಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ದೂರನ್ನು ನಿಪಿ-5 ಎಂದು ಗುರುತಿಸಲಾಯಿತು.

ಮಹಜರ್ ಕಾಲದಲ್ಲಿ ಅಮಾನತ್ತು ಪಡಿಸಿಕೊಂಡ 5 ಲೀಟರ್ ಸಾಮಾರ್ಥ್ಯದ ಒಂದು ಕಬ್ಬಿಣದ ಅಳತೆ ಮಾಪನ , ಒಂದು ಕಬ್ಬಿಣದ ಆಲಿಕೆ, ಕಬ್ಬಿಣದ ಬಕೆಟ್ ಮತ್ತು ಮಾದರಿಗೆಂದು ತೆಗೆದ 750 ಎಂ.ಎಲ್. ನ  4 ಗಾಜಿನ  ಬಾಟಲುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 5 ಲೀಟರ್ ಸಾಮಾರ್ಥ್ಯದ ಒಂದು ಕಬ್ಬಿಣದ ಅಳತೆ ಮಾಪನ , ಒಂದು ಕಬ್ಬಿಣದ ಆಲಿಕೆ, ಕಬ್ಬಿಣದ ಬಕೆಟ್ ಮತ್ತು ಮಾದರಿಗೆಂದು ತೆಗೆದ 750 ಎಂ.ಎಲ್. ನ  4 ಗಾಜಿನ  ಬಾಟಲುಗಳನ್ನು ನೋಡಿ ಗುರುತಿಸಿದ್ದು, 5 ಲೀಟರ್ ಸಾಮಾರ್ಥ್ಯದ ಒಂದು ಕಬ್ಬಿಣದ ಅಳತೆ ಮಾಪನವನ್ನು ಎಂ.ಒ-1 ಎಂದು, ಒಂದು ಕಬ್ಬಿಣದ ಆಲಿಕೆಯನ್ನು

ಎಂ.ಒ-2 ಎಂದು, ಕಬ್ಬಿಣದ ಬಕೆಟ್ ಅನ್ನು ಎಂ.ಒ-3 ಎಂದು, ಮತ್ತು ಮಾದರಿಗೆಂದು ತೆಗೆದ 750 ಎಂ.ಎಲ್. ನ 4 ಗಾಜಿನ ಬಾಟಲುಗಳನ್ನು ಕ್ರಮವಾಗಿ ಎಂ.ಒ-4 ರಿಂದ ಎಂ.ಒ-7 ಎಂದು ಗುರುತಿಸಲಾಯಿತು.

ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಈಗ ನನಗೆ ತೋರಿಸಿದ ಫೋಟೋಗಳನ್ನು ಮಹಜರ್ ಕಾಲದಲ್ಲಿ ತೆಗೆಯಲಾಗಿರುತ್ತದೆ. ಸಿ.ಡಿ ಅಥವಾ ನೆಗಟಿವ್ ಇರದ ಕಾರಣ ಅವುಗಳನ್ನು ನಿಶಾನೆಯಾಗಿ ಗುರುತಿಸಿರುವುದಿಲ್ಲ.

**ಪಾಟೀ ಸವಾಲುಃ ಶ್ರೀ ಆರ್.ಎಂ. ಆರೋಪಿ ಪರ ವಕೀಲರಿಂದಃ**

ನನಗೆ ಮಾಹಿತಿ ಬಂದಾಗ ಸಮಯ ಬೆಳಗ್ಗೆ 9.30 ಗಂಟೆಯಾಗಿತ್ತು. ನನಗೆ ಯಾವುದೇ ಮಾಹಿತಿ ಬಂದಿಲ್ಲ ಎಂದರೆ ಸರಿಯಲ್ಲ. ನನಗೆ ಮಾಹಿತಿ ಬಂದ ಕೂಡಲೇ ನಾನು ಸ್ಥಳಕ್ಕೆ ಹೊರಟು ಬೆಳಗ್ಗೆ 10.00 ಗಂಟೆಗೆ ಮಾಹಿತಿ ಬಂದ ಸ್ಥಳ ತಲುಪಿರುತ್ತೇನೆ. ನಾನು ಆರ್.ಕೆ. ಹೊಟೇಲ್ ಗೆ ಹೊಂದಿಕೊಂಡಂತಹ ಮಳಿಗೆಗೆ ಭೇಟಿ ನೀಡಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ನಾವು ತೆಗೆದುಕೊಂಡು ಹೋಗಿದ್ದ ಅಳತೆ ಮಾಪನದಿಂದ ಸೀಮೆಎಣ್ಣೆಯನ್ನು ಅಳತೆ ಮಾಡಿರುತ್ತೇವೆ. ನಾನು ಸುಳ್ಳು ದೂರನ್ನು ನೀಡಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**1 ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**